ಊ) ಮುಂಬರುವ ಮಳೆಗಾಲದೊಳಗಾಗಿ ಕೆರೆಯನ್ನು ಎಲ್ಲಾ ರೀತಿಯಿಂದ 1992ರ ಮೇ ಒಳಗಾಗಿ ಸರಿಪಡಿಸಿ ಮುಗಿಸಲಾಗುವುದು.

ಬಂಗಾರುಪೇಟೆ ತಾಲ್ಲೂಕು ಕನಮನಹಳ್ಳಿ ರಸ್ತೆಯ ಅಭಿವೃದ್ಧಿ

1104 (1707) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ. ಬಂಗಾರಪೇಟೆ ತಾಲ್ಲೂಕು ಬೂದಿಕೋಟೆ-ಬಂಗಾರಪೇಟೆಯಿಂದ ಕನಮನಹಳ್ಳಿ ರಸ್ತೆಯ ಉದ್ದವೆಷ್ಟು?

ಆ) ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಯಾವಾಗ ವಶಕ್ಕೆ ತೆಗೆದುಕೊಳ್ಳಲಾಯಿತು?

ಇ) ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ನಂತರ ಖರ್ಚು ಮಾಡಿದ ಹಣವೆಷ್ಟು? ಖರ್ಚು ಮಾಡದಿದ್ದಲ್ಲಿ ಕಾರಣವೇನು?

ಈ) ಈ ರಸ್ತೆಯು ಅಂತರ ರಾಜ್ಯ ರಸ್ತೆಗಳಿಗೆ ಸೇರಿದ್ದರೂ ಸಹ. ಇದನ್ನು ಅಭಿವೃದ್ಧಿಪಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರದ ಈ ಬಗ್ಗೆ ಕ್ರಮ ಕೈಕೊಳ್ಳುವುದೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) ಬೂದಿಕೋಟೆ ಕನಮನಹಳ್ಳಿ ರಸ್ತೆಯ ಒಟ್ಟು ಉದ್ದ 20.50 ಕಿ.ಮೀ.

ಆ) ಈ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ 1987ರಲ್ಲಿ ತೆಗೆದುಕೊಳ್ಳಲಾಗಿದೆ.

	ಲಕ್ಷ ರೂ.ಗಳು
ಇ) 1987-88ನೇ ಸಾಲಿನಿಂದ 1990-91ನೇ ಸಾಲಿನವರೆಗೆ	1.90
1991-92ನೇ ಸಾಲಿನಲ್ಲಿ ಫೆಬ್ರವರಿ 92ರವರೆಗೆ	5.28
ಒಟ್ಟು	7.18

ಈ) ಲಭ್ಯವಿರುವ ಅನುದಾನದಲ್ಲಿ ಈ ರಸ್ತೆಯ ಅಭಿವೃದ್ಧಿ ಮಾಡುತ್ತಿದ್ದು ರಸ್ತೆ ಸಂಚಾರ ಯೋಗ್ಯವಾಗಿದೆ.

ಉ) ಬೂದಿಕೋಟೆ-ಕನಮನಹಳ್ಳಿ ರಸ್ತೆಗೆ 1991-92ನೇ ಸಾಲಿನಲ್ಲಿ ಯೋಜನೇತರ ಶೀರ್ಷಿಕೆಯಡಿ 3.00 ಲಕ್ಷ ರೂ. ಹಾಗೂ ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 6.00 ಲಕ್ಷ ರೂ.ಗಳಿಗೆ ಅಂದಾಜು ಮಂಜೂರಾಗಿದ್ದು, ಅಭಿವೃದ್ಧಿ ಕಾಮಗಾರಿಗಳು ಶೀಘ್ರ ಪ್ರಗತಿಯಲ್ಲಿದೆ.